ಅ) ಹುಬ್ಬಳ್ಳಿ - ಧಾರವಾಡ ಮಹಾನಗರದ ಮಿತಿಯಲ್ಲಿ ರಾಷ್ಟ್ರೀಯ ಹೆದ್ದಾರಿ-4 ರಸ್ತೆಯ ಬಲಪಡಿಸುವ ಕೆಲಸ 11 ಕಿ.ಮೀ. ಮುಗಿದಿರುತ್ತದೆ ಸದರೀ ಕೆಲಸಕ್ಕೆ ಇದುವರೆಗೆ 330.00 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

1995-96ನೇ ಸಾಲಿನಲ್ಲಿ ಪಶುದವಾಖಾನೆಗಳಿಗೆ ಔಷಧಿ ಪೂರೈಕೆ

255 - ಶ್ರೀ ಯು.ಟಿ. ಬಣಕಾರ್, (ಹಿರೇಕೆರೂರು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96ನೇ ಸಾಲಿನಲ್ಲಿ ಪಶುವಿನ ಆಸ್ಪತ್ರೆಗಳಿಗೆ ಔಷಧಿ ಪೂರೈಸಲು ಸರ್ಕಾರದವರು ನಿಗದಿಪಡಿಸಿರುವ ಮೊತ್ತ ಎಷ್ಟು?*

ಆ) *30-6-96ರ ವರೆಗೆ ಔಷಧಿ ಪೂರೈಸಿದ ಹಣದ ಮೊತ್ತವೆಷ್ಟು?*

ಇ) *1994-95ನೇ ಸಾಲಿಗೆ ಔಷಧಿ ಖರೀದಿಸಿ ನಿಗದಿಪಡಿಸಿದ್ದ ಹಾಗೂ ಖರ್ಚಾದ ಹಣವೆಷ್ಟು?*

ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ರೂ. 405.00 ಲಕ್ಷಗಳು

ಆ) ಇಲ್ಲ

ಇ)

1) ನಿಗದಿಪಡಿಸಿದ ಹಣ ರೂ. 396.16 ಲಕ್ಷಗಳು

2) ಖರ್ಚಾದ ಹಣ ರೂ. 385.70 ಲಕ್ಷಗಳು

ಚಾಮರಾಜನಗರ ತಾಲ್ಲೂಕಿನಲ್ಲಿ ವಿದ್ಯುತ್ ಅಭಾವ

354 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಾಮರಾಜನಗರ ತಾಲ್ಲೂಕಿನಲ್ಲಿ ತೀವ್ರ ವಿದ್ಯುಚ್ಛಕ್ತಿ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಅದನ್ನು ನಿವಾರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು.

ಆ) ಸರ್ಕಾರ ಕೆಳಕಂಡ ಕಾರ್ಯಗಳನ್ನು ಈ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಹಮ್ಮಿಕೊಂಡಿದೆ.

1) ಸಂತೇಮರಹಳ್ಳಿಯಲ್ಲಿ ಒಂದು 66 : 11 ಕೆ.ವಿ. ವಿದ್ಯುತ್ ಉಪಕೇಂದ್ರದ ಸ್ಥಾಪನೆ

2) ಚಂದಕವಾಡಿಯಲ್ಲಿ ಒಂದು 33 : 11 ಕೆ.ವಿ. ವಿದ್ಯುತ್ ಉಪಕೇಂದ್ರದ ಸ್ಥಾಪನೆ

3) ಚಾಮರಾಜನಗರ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಮೈಸೂರು ಜಿಲ್ಲೆಯ ಕಡಕೊಳದಲ್ಲಿ ಒಂದು 220 : 66 ಕೆ.ವಿ ವಿದ್ಯುತ್ ಸ್ವೀಕರಣಾ ಕೇಂದ್ರದ ಸ್ಥಾಪನೆ.

ಬೇಡ್ತಿ ಜಲವಿದ್ಯುತ್ ಯೋಜನೆ

18-ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?